## ಕರ್ನಾಟಕ ಸರಕಾರ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ ಗುಲಬರ್ಗಾ

ಸಂಖ್ಯೆ: ಸಿ4(1) ಪ್ರೌಶಾಶಿ ಚಿ.ಶಿಕ್ಷಕರ ಜೇ.ಪಟಿ / 09/ 2013–14 ದಿನಾಂಕ:05.09.2013

ಜ್ಞಾಪನ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತಾಲಯ ಗುಲಬರ್ಗಾ ವಿಭಾಗ ಮಟ್ಟದ ಸರ್ಕಾರಿ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಿರ ತಾತ್ಕಲಿಕ ಜೇಷ್ಠತಾ ಪಟ್ಟಿಯಲ್ಲಿರುವ ದಿನಾಂಕ 31.12.2012ರಲ್ಲಿ ಇದ್ದಂತೆ ಪ್ರಕಟಿಸುವ ಕುರಿತು.

ಉಲ್ಲೇಖ 1 ಸರಕಾರದ ಆದೇಶ ಸಂಖ್ಯೆ ಇಡಿ 250 ಡಿ.ಪಿ.ಐ. 2006 ದಿನಾಂಕ 22.02.2008
2 ಸರಕಾರದ ಆದೇಶ ಸಂಖ್ಯೆ ಇಡಿ 464 ಡಿಪಿಐ 2008 ದಿನಾಂಕ 6.01.2009

*******

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ವಿಭಾಗ ಮಟ್ಟದ ಸರ್ಕಾರಿ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರ ಗುಲಬರ್ಗಾ ವಿಭಾಗ ಮಟ್ಟದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ 31.12.2012 ರಲ್ಲಿ ಇದ್ದಂತೆ ಈ ಕಛೇರಿಯ ವೆಬಸೈಟ್ (www.cpigulbarga.kar.nic.in) ಮೂಲಕ ಪ್ರಕಟಿಸಲಾಗಿದೆ. ಪ್ರಯುಕ್ತ ಈ ಪಟ್ಟಿಯ ಬಗ್ಗೆ ವ್ಯಾಪಕ ಪ್ರಚಾರ ಪಡಿಸಿ ಎಲ್ಲಾ ಚಿತ್ರಕಲಾ ಶಿಕ್ಷಕರ ಗಮನಕ್ಕೆ ತಂದು ಅವರಿಂದ ಈ ಜೇಷ್ಠಾಪಟ್ಟಿಯಲ್ಲಿ ಆಕ್ಷೇಪಣೆ ಇದ್ದಲ್ಲಿ ದಿನಾಂಕ: 16.09.2013 ರೊಳಗಾಗಿ ಪಡೆದುಕೊಂಡು ದಿನಾಂಕ 20.09.2013 ರಂದು ತಪ್ಪದೇ ಖುದ್ದಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

ಸದರಿ ಚಿತ್ರಕಲಾ ಶಿಕ್ಷಕರ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗೂ ಸಿ.ಡಿ. (ಎಕ್ಸಲ್ ನುಡಿ 01) ರಲ್ಲಿ ತಯ್ಯಾರಿಸಿ ಸಲ್ಲಿಸತಕ್ಕದ್ದು ಹೊಸದಾಗಿ ಜೇಷ್ಠತಾ ಪಟ್ಟಿಯಲ್ಲಿ ಸೇರಿಸುವ ಶಿಕ್ಷಕರ ವಿವರವಾದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು. ಹಾಗೂ ಈ ಜೇಷ್ಠತಾ ಪಟ್ಟಿಯಲ್ಲಿ ಏನಾದರೂ ತಿದ್ದುಪಡಿ ಮಾಡಬೇಕಾದಲ್ಲಿ ತಿದ್ದುಪಡಿ ಮಾಹಿತಿಯನ್ನು ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು. ನಿಗದಿತ ದಿನಾಂಕದಂದು ತಮ್ಮಿಂದ ಮಾಹಿತಿ ಬಾರದೇ ಇದ್ದಲ್ಲಿ ಯಾವುದೆ ಆಕ್ಷೇಪಣೆ ಇರುವುದಿಲ್ಲವೆಂದು ಪರಿಗಣಿಸಿ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿಯನ್ನು ಪ್ರಕಟಿಸಲಾಗುವುದು.

5/9/13

ನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ

ವಿಭಾಗದ ಎಲ್ಲ ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ವಿಭಾಗದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಎಲ್ಲಾ ವ್ಯಾಪ್ತಿಯಲ್ಲಿ ಬರುವ ಪ್ರೌಢಶಾಲಾ ಮುಖ್ಯೋಪಾಧ್ಯಾಯರ / ಸಹ ಶಿಕ್ಷಕರ ಗಮನಕ್ಕೆ ತರಲು ಅಗತ್ಯ ಕ್ರಮ ಅನುಸರಿಸುವುದು.